**ಚಿತ್ರಕತೆ:** ಅಹಮದ್ ಅಬು ನಾಸಿರ್ ಮತ್ತು ಮೊಹಮ್ಮದ್ ಅಬು ನಾಸಿರ್
**ಸಂಗೀತ ನಿರ್ದೇಶನ:** ಬೆಂಜಮಿನ್ ಗ್ರಾಸ್ಪಿರಾನ್
**ಸಂಕಲನ:** ಎರಿಕ್ ಡೆವಿನ್
**ಅವಧಿ:** 85ನಿಮಿಷ
**ಭಾಷೆ:** ಫ್ರೆಂಚ್ ಮತ್ತು ಅರಬಿಕ್

ಸಮಾಜದೊಳೊಳಗಿನ ಸೊಕ್ಕು, ಸಹಜತೆ ಮತ್ತು ಆಸಕ್ತಿಗಳೇ ದೇಶದ್ದೂ ಆಗಬಹುದು. ಹಾಗೆಯೇ ದೇಶವೊಂದರ ಹಿಂಸೆ, ಅತಿರೇಕಗಳು ಅಲ್ಲಿನ ಸಮಾಜದ ಒಳಗಿನ ಹಿಂಸೆಯ ಲಕ್ಷಣಗಳನ್ನೇ ಹೋಲುತ್ತವೆ. ಇಂಥ ಲಾಕ್ಷಣಿಕ ಚಿತ್ರಣವನ್ನು ಅತ್ಯಂತ ತಮಾಷೆಯಾಗಿ ಕಟ್ಟಿಕೊಡುವ ಚಿತ್ರ 'ಡಿಗ್ರೇಡ್'. ದೇಶ, ಧರ್ಮ ಭಕ್ತಿಗಳ ಅತಿರೇಕ ಮತ್ತು ಪುಂಡಾಟಿಕೆಯನ್ನು ಮೆಲುದನಿಯಲ್ಲೇ ಲೇವಡಿಗೊಳಪಡಿಸುತ್ತದೆ.

ನಿರೂಪಣೆ ಚಿತ್ರದ ಹೈಲೈಟ್. ಸಹಜ ಚಿತ್ರಣಗಳಿಂದ ತೆರಕೊಳ್ಳುವ 'ಡಿಗ್ರೇಡ್' ಕ್ರಮೇಣ ಒಂದು ದೇಶ, ಪ್ರದೇಶದ ಸಮಾಜೋರಾಜಕೀಯವನ್ನು ವ್ಯಂಗ್ಯವಾಗಿ ಕಟ್ಟಿಕೊಡುತ್ತದೆ.

ಫಲಿಸ್ತಾನದ (ಪ್ಯಾಲೆಸ್ಟೀನ್) ಗಾಜಾ ಪಟ್ಟಿಯಲ್ಲಿ ಅದೊಂದು ಬೇಸಿಗೆ ಕಾಲ. ಬ್ಯೂಟಿ ಪಾರ್ಲರ್‌ನಲ್ಲಿ ಹದಿಮೂರು ಹೆಣ್ಣು ಮಕ್ಕಳು ಸಿಂಗಾರಕ್ಕೆಂದು ಸೇರಿಕೊಂಡ ಸಂದರ್ಭವನ್ನಿಟ್ಟುಕೊಂಡು ಈ ಚಿತ್ರ ಶುರುವಾಗುತ್ತದೆ. ಮದುಮಗಳಿಗೆ ಮೇಕಪ್, ಆಂಟೀಗೆ ಬ್ಯೂಟಿಟಚ್ ಅಪ್, ಮಧ್ಯವಯಸ್ಸಿನ ಹೆಂಗಸಿಗೆ ಫೇಸಿಯಲ್... ಇಲ್ಲಿ ಒಬ್ಬೊಬ್ಬರದು ಒಂದೊಂದು ಸೌಂದರ್ಯ ಪ್ರಜ್ಞೆ. ಈ ಗಿರಾಕಿಗಳನ್ನು ನಿಭಾಯಿಸಲು ಹೆಣಗುವ ಸಲೂನಿನ ಒಡತಿ ರಷ್ಯನ್ ಹೆಂಗಸು ವಿಕ್ಟೋರಿಯಾಗೆ ಬೇಗ ಸಲೂನ್ ಮುಚ್ಚಿ ಗಂಡನ ತೆಕ್ಕೆ ಸೇರುವ ಕಾತರ. ಮಂದಗತಿಯ ಅವಳ ಸಹಾಯಕಿ ಕ್ರಿಸ್ಟಿನಾಗೆ ಕೆಲಸದ ಮೇಲೆ ಗಮನವಿಲ್ಲ. ಸದಾ ತನ್ನ ಹುಚ್ಚುತನದ ಪ್ರಿಯಕರ ಏನಾದರೂ ಎಡವಟ್ಟು ಮಾಡಿಕೊಂಡಾನೆಂಬ ಭಯದಲ್ಲಿರುವಾಕೆ. ಅವನೋ ಸಿಂಹದ ಮರಿಯೊಂದನ್ನು ಎಗರಿಸಿ ಪಾರ್ಲರ್ ಮುಂದೆಯೇ ಕಟ್ಟಿ ಹಾಕಿದ್ದಾನೆ. ಈ ಸಿಂಹದ ಮರಿಯ ಹುಡುಕಾಟದಲ್ಲಿ ಗಾಜಾ ಸರ್ಕಾರ ಅರ್ಥಾತ್ ಹಮಾಸ್ (ಒಂದು ತೀವ್ರವಾದಿ ಗುಂಪು) ಇದೆ. ಯಾವುದೇ ಪರಿಸ್ಥಿತಿಯಲ್ಲಿ ಸಿಂಹದ ಮರಿ ಪತ್ತೇ ಹಚ್ಚುವುದು ಅದರ ಉದ್ದೇಶ. ಇದು ಸಿನಿಮಾದ ಅಸಲಿ ವಸ್ತು.

ಸಿಂಹದ ಮರಿ ಪತ್ತೆಗಾಗಿ ನಡೆವ ಸೇನಾ ಕಾರ್ಯಾಚರಣೆಯಿಂದಾಗಿ ಸೃಷ್ಟಿಯಾಗುವ ಬಿಗುವಿನ ವಾತಾವರಣ, ಭೀಕರ ಗುಂಡಿನ ಕಾಳಗ, ಯುದ್ಧದಂಥ ಪರಿಸ್ಥಿತಿಯಿಂದಾಗಿ ಪಾರ್ಲರ್ ಒಳಗಿನ ಹೆಣ್ಣು ಮಕ್ಕಳು ಟ್ರ್ಯಾಪ್ ಆಗುತ್ತಾರೆ. ಇದು ಚಿತ್ರದಲ್ಲಿ ಕುತೂಹಲ ಹುಟ್ಟಿಸುವಂಥ ಮಹತ್ವದ ನಾಟಕೀಯ ತಿರುವು.

ಪಾರ್ಲರ್‌ನ ಅನತಿ ದೂರದಲ್ಲಿ ಗುಂಡಿನ ಸುರಿಮಳೆ. ಜಟಾಪಟಿ, ಚಕಮಕಿ ನಡೆಯುತ್ತಿದ್ದರೆ ಇತ್ತ ಹೆಂಗಸರಿಗೆ ತಮ್ಮ ಹಣ್ಣಾದ, ಸುಕ್ಕುಗಟ್ಟಿದ ಮೂತಿಗಳ ರಿಪೇರಿ ಅಥವಾ ಪ್ಯಾಚ್‌ಅಪ್ ಮಾಡಿಸಿಕೊಳ್ಳುವ ತವಕ. ಅಲ್ಲೊಬ್ಬ ಬಜಾರಿ. ಹೆಣ್ಣುಗಳ ಅಂತರಂಗದ ವಾಸ್ತವಕ್ಕೆ